ಫಾರೆಸ್ಟ್.

ಇಸ್ತಿಹಾರ್‌ನಾಮೆ.

ತಾರೀಖು 30ನೆ ನವಂಬರ್ 1903.

ನಂ. 352—3783, ಸ್ಯ 1900ನೆ ಇಸವಿಯ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನುಸರಿಸಿ ಮೈಸೂರ ಸೀಮೆಯ ಶ್ರೀಮಂತ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಈ ಇಸ್ತಿಹಾರ್‌ನಾಮೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1904ನೆ ಜನವರಿ ಗುರಿ ಲಾಗಾಯತು ಸದರೀ ಇಸ್ತಿಹಾರಿನ ಅಡೀಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಬಳಪಟ್ಟು "ಸ್ಟೇಟ್ ಫಾರೆಸ್ಟ್‌ಗಿ" ಇರತಕ್ಕದ್ದೆಂದು ಎಣಿಸಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ತುಮಕೂರು.	ಕೊರಟಗೆರೆ ಸಬ್ ತಾಲ್ಲೂಕು.	1,649 ಎಕರೆ 17 ಗುಂಟೆಗಳು.	ಮಂದಗಿರಿ ಸ್ಟೇಟ್ ಫಾರೆಸ್ಟು ಕೋಳಿಕಲ್ ಬ್ಲಾಕಿನ ಬಡಾವಣೆ.	ಉತ್ತರಕ್ಕೆ.—ನೆಗಲಾಲಿನ ಸರ್ವೆ ನಂ. 88ರ ನೈರುತ್ಯ ಮೂಲೆಯಿಂದ ಹೊರಟು ಲೈನು ಅದೇ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಬುದಗಾವಿಯ ಸರ್ವೆ ನಂ. 29ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 29 ವ 31 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 32ರ ನೈರುತ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಸರ್ವೆ ನಂ. 32ರ ದಕ್ಷಿಣ ಪಾರ್ಶ್ವ ಮತ್ತು ಸರ್ವೆ ನಂ. 33ರ ಪಶ್ಚಿಮ ಪಾರ್ಶ್ವ ಇವುಗಳ ಉದ್ದಕ್ಕೂ ಸರ್ವೆ ನಂ. 14ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ 14, 11 ವ 17 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಆಖೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಬುದಗಾವಿಯ ಸರ್ವೆ ನಂ. 17, 7 ವ 6 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಬುದಗಾವಿಯ ಸರ್ವೆ ನಂ. 35, 39 ವ 38 ಇವುಗಳ ದಕ್ಷಿಣ ಎಲ್ಲೆಯಾಗಿರುವ ನಾಲಾ ಉದ್ದಕ್ಕೂ ಕುಂಟೇನಹಳ್ಳಿಯ ಸರ್ವೆ ನಂ. 11ರ ವಾಯುವ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ಕುಂಟೇನಹಳ್ಳಿಯ ಸರ್ವೆ ನಂ. 11 ಮತ್ತು ಬಂದೊಣಿಯ ಸರ್ವೆ ನಂ. 26 ವ 25 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಮದ್ದಗಿರಿ ಸ್ಟೇಟ್ ಫಾರೆಸ್ಟು ಕೋಳಿಕಲ್ ಬ್ಲಾಕಿನ ಎಲ್ಲೆಗೆ ಹೋಗುತ್ತದೆ. ತರುವಾಯು ಮೇಲ್ಕಂಡ ಎಲ್ಲೆಯ ಉದ್ದಕ್ಕೂ ಕೂರ್ಮಕೋಟೆಯ ಸರ್ವೆ ನಂ. 66ರ ವಾಯುವ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಕೂರ್ಮಕೋಟೆಯ ಸರ್ವೆ ನಂ. 53ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಜಂಜರಾವನಹಳ್ಳಿಯ ಸರ್ವೆ ನಂ. 1ರ ಮಧ್ಯೆ ಅದೇ ಗ್ರಾಮದ ಸರ್ವೆ ನಂ. 60ರ ಪೂರ್ವ ಎಲ್ಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಜಂಜರಾವನ ಹಳ್ಳಿಯ ಸರ್ವೆ ನಂ. 60 ಮತ್ತು ಮೂರನಾಯಿಕನ ಹಳ್ಳಿಯ ಸರ್ವೆ ನಂ. 42 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯು ಈಶಾನ್ಯ ದಿಕ್ಕಾಗಿ ನೆಗಲಾಲಿನ ಸರ್ವೆ ನಂ. 102ರ ಮಧ್ಯೆ ಹೊರಟ ಸ್ಥಳಕ್ಕೆ ಹೋಗುತ್ತದೆ.

ಷರಾ:—ಎ.—ನಾಲ್ಕು ಗಜಗಳಿಗೆ ಮಿಗಾದ ಅಗಲಕ್ಕೆ ಹಾದಿಯು ಇದ್ದಂಡೀ ಕಂಡ ಹಕ್ಕುಗಳು ಜನಗಳಿಗೆ ಮಾತ್ರ ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ :—

1. ಕೂರಂಕೋಟೆಯಿಂದ ಸಿದ್ಧೇಶ್ವರದೇವಸ್ಥಾನಕ್ಕೆ ಹಾದಿ. ಈ ಹಾದಿಯು ಸ್ಟೇಟ್ ಫಾರೆಸ್ಟನ್ನು ಕೂರಂಕೋಟೆಯ ಸರ್ವೆ ನಂ. 53ಕ್ಕೂ ಮತ್ತು 52ಕ್ಕೂ ಮಧ್ಯೆ ಹದ್ದು ವಿಂಗಡಿಸಲ್ಪಟ್ಟ ಲೈನಿನಲ್ಲಿ ಅದೇ ಗ್ರಾಮದ ಸರ್ವೆ ನಂ. 65ರ ನೈರುತ್ಯ ಮೂಲೆಯಿಂದ 200 ಗಜಗಳ ಫಾಸಲೆಯಲ್ಲಿ ಪ್ರವೇಶಿಸಿ 1,958 ಗಜಗಳ ವರಿವಿಗೆ ಉತ್ತರ ದಿಕ್ಕಾಗಿಯು, ಮತ್ತು ವಾಯುವ್ಯ ದಿಕ್ಕಾಗಿಯು ಸದರೀ ಸ್ಟೇಟ್ ಫಾರೆಸ್ಟ್‌ನಲ್ಲಿನ ಬೆಟ್ಟದಲ್ಲಿರುವ ದೇವಸ್ಥಾನವನ್ನು ಮುಟ್ಟುವ ವರಿವಿಗೆ ಹೋಗುತ್ತದೆ.

2. ಕೂರಂಕೋಟೆಯಿಂದ ಈಶ್ವರ ದೇವಸ್ಥಾನಕ್ಕೆ ಹಾದಿ. ಈ ಹಾದಿಯು ಫಾರೆಸ್ಟನ್ನು ಕೂರಂಕೋಟೆಯ ಸರ್ವೆ ನಂ. 53ಕ್ಕೂ ಮತ್ತು 52ಕ್ಕೂ ಮಧ್ಯೆ ಹದ್ದು ವಿಂಗಡಿಸಲ್ಪಟ್ಟ ಲೈನಿನಲ್ಲಿ ಅದೇ ಗ್ರಾಮದ ಸರ್ವೆ ನಂ. 53ರ ವಾಯುವ್ಯ ಮೂಲೆಯಿಂದ 2 ಫರ್ಲಾಂಗುಗಳ ದೂರದಲ್ಲಿ ಪ್ರವೇಶಿಸಿ 5 ಫರ್ಲಾಂಗುಗಳ ವರಿವಿಗೆ ವಾಯುವ್ಯ ದಿಕ್ಕಾಗಿ ಸದರೀ ಸ್ಟೇಟ್ ಫಾರೆಸ್ಟಿನ ಬೆಟ್ಟದಲ್ಲಿರುವ ಈಶ್ವರ ದೇವಸ್ಥಾನಕ್ಕೆ ಹೋಗುತ್ತದೆ.

3. ಜಂಜರಾವನಹಳ್ಳಿಯಿಂದ ಈಶ್ವರ ದೇವಸ್ಥಾನಕ್ಕೆ ಹಾದಿ. ಈ ಹಾದಿಯು ಫಾರೆಸ್ಟನ್ನು ಕೂರಂಕೋಟೆಯ ಸರ್ವೆ ನಂ.

53ರ ವಾಯುವ್ಯ ಮೂಲೆಯಿಂದ 2 ಫರ್ಲಾಂಗುಗಳ ದೂರದಲ್ಲಿ ಜುಂಜರಾವನ ಹಳ್ಳಿಯ ಸರ್ವೆ ನಂ. 1ರ ಮಧ್ಯೆ ಹೋಗುವ ಹದ್ದು ವಿಂಗಡಿಸಲ್ಪಟ್ಟ ಲೈನಿನಲ್ಲಿ ಪ್ರವೇಶಿಸಿ 2,354 ಗಜಗಳ ವರಿವಿಗೆ ಈಶಾನ್ಯ ದಿಕ್ಕಾಗಿ ದೇವಸ್ಥಾನವನ್ನು ಮುಟ್ಟುವ ವರಿವಿಗೂ ಹೋಗುತ್ತದೆ.

4. ನೇಗಲಾಲಿನಿಂದ ಸಿದ್ಧೇಶ್ವರ ದೇವಸ್ಥಾನಕ್ಕೆ ಹಾದಿ. ಈ ಹಾದಿಯು ಫಾರೆಸ್ಟನ್ನು ಬುದಗಾವಿಯು ಸರ್ವೆ ನಂ. 31ರಲ್ಲಿ ಅದೇ ಸರ್ವೆ ನಂಬರಿನ ನೈರುತ್ಯ ಮೂಲೆಯಿಂದ 110 ಗಜಗಳ ದೂರದಲ್ಲಿ ಪ್ರವೇಶಿಸಿ 1,364 ಗಜಗಳ ವರಿವಿಗೆ ಆಗ್ನೇಯ ದಿಕ್ಕಾಗಿ ದೇವಸ್ಥಾನಕ್ಕೆ ಹೋಗುತ್ತದೆ.

ತಾರೀಖು 30ನೆ ನವಂಬರ್ 1903.

ನಂ. 361—3791, ಸ್ಯ 1900ನೆ ಇಸವಿಯ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 17ನೆ ಸೆಕ್ಷನ್ನಿನ ವಿಧಿಗಳನುಸರಿಸಿ ಮೈಸೂರ ಸೀಮೆಯ ಶ್ರೀಮಂತ ಮಹಾರಾಜಾ ಸಂಸ್ಥಾನದವರು ಪ್ರಸಿದ್ಧಪಡಿಸುವದೇನಂದರೆ, ಈ ಇಸ್ತಿಹಾರ್ನಾಮೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1904ನೆ ಜನವರಿ ಗುರ್ರೆ ಲಾಗಾಯತು ಸದರೀ ಇಸ್ತಿಹಾರಿನ ಅಜೀಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು "ಸ್ಟೇಟ್ ಫಾರೆಸ್ಟಾಗಿ" ಇರತಕ್ಕದ್ದೆಂದು ಎಣಿಸಲ್ಪಟ್ಟಿರುತ್ತ :—

ಷೆಡ್ಯೂಲ್.

ತಾಲ್ಲೂಕು.	ಹಾಲ್ಲೂಕು	ಸುಮಾರು ವಿಸ್ತೀರ್ಣ.	ಪ್ರಸ್ತಾಪನ ಹೆಸರು.	ಚಕ್ಕುಬಂದಿ.
ತುನಕೂರು.	ಮದ್ದಗಿರಿ ತಾಲ್ಲೂಕು ಮತ್ತು ಕೊರಟಗೆರೆ ಸಬ್ ತಾಲ್ಲೂಕು	ಎಕರೆ. ಗುಂಟೆ. 2284 18	ಮದ್ದಗಿರಿ ಸ್ಟೇಟ್ ಫಾರೆಸ್ಟ್ ವಿಸ್ತರಣೆ	ಉತ್ತರಕ್ಕೆ.—ಮದ್ದಗಿರಿ ಸ್ಟೇಟ್ ಫಾರೆಸ್ಟಿನ ಹದ್ದು ವಿಂಗಡಿಸಲ್ಪಟ್ಟ ಲೈನಿನಲ್ಲಿ ಕಮ್ಮನಕೋಟೆ ಗ್ರಾಮದ ಸರ್ವೆ ನಂ. 43ರ ಅತ್ಯಂತ ದಕ್ಷಿಣ ಸ್ಥಳದಲ್ಲಿ ಹೊರಟು ಲೈನು ಆಗ್ನೇಯದಿಕ್ಕಾಗಿ ಸರ್ವೆ ನಂ. 44 ವ 33 ಇವುಗಳ ಮಧ್ಯೆ ಅದೇ ಗ್ರಾಮದ ಸರ್ವೆ ನಂ. 31ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 31 ವ 30 ಇವುಗಳ ದಕ್ಷಿಣಪಾರ್ಶ್ವದ ಉದ್ದಕ್ಕೂ ಆಖೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆ ಮೇಲೆ ಅದೇ ಗ್ರಾಮದ ಸರ್ವೆ ನಂ. 30 ವ 28 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಚಿನಕವಜರವಿನ ಸರ್ವೆ ನಂ. 29ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂ. 29ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 16ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 17 ವ 13 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರು ಚಿನಕವಜರವಿನ ಸರ್ವೆ ನಂ. 163ರನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಆಗ್ನೇಯ ದಿಕ್ಕಾಗಿ ಚಿನಕವಜರ ಗ್ರಾಮದ ಸರ್ವೆ ನಂ. 163ರ ಮಧ್ಯೆ ಅದೇ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಚಿನಕವಜರವಿನ ಸರ್ವೆ ನಂ. 58ರ ಮಧ್ಯೆ ಮತ್ತು ದಾಸರಹಳ್ಳಿ ವ ಜೋಡಿ ಇನಾಂ ವಲಸೆವೀರನಹಳ್ಳಿ ಇವುಗಳ ಪಶ್ಚಿಮ ಎಲ್ಲೆಗಳ ಉದ್ದಕ್ಕೂ ಚೆನ್ನರಾಯದುರ್ಗ, ಬೀರನಹಳ್ಳಿ ಮತ್ತು ವಲಸೆವೀರನಹಳ್ಳಿ ಇವುಗಳ ಬಾಂದುಗಳನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಚೆನ್ನರಾಯದುರ್ಗದ ಸರ್ವೆ ನಂ. 11ರ ಮಧ್ಯೆ ಸರ್ವೆ ನಂ. 10ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 1ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 63ರನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಚೆನ್ನರಾಯದುರ್ಗದ ಸರ್ವೆ ನಂ. 63, 73 ವ 55 ಇವುಗಳ ಉತ್ತರ ಪಾರ್ಶ್ವದ ಉದ್ದಕ್ಕೂ ಚೆನ್ನರಾಯದುರ್ಗ ಮತ್ತು ಮದ್ದಗಿರಿ ಸ್ಟೇಟ್ ಫಾರೆಸ್ಟ್ ಇವುಗಳ ಎಲ್ಲೆ ಗುರ್ತುಗಳನ್ನು ಮುಟ್ಟುವ ಆಖೈರ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಮದ್ದಗಿರಿ ಸ್ಟೇಟ್ ಫಾರೆಸ್ಟಿನ ಆಗ್ನೇಯ ದಿಕ್ಕಿಗೆ ಹೋಗುತ್ತದೆ. ಪಶ್ಚಿಮಕ್ಕೆ.—ಮದ್ದಗಿರಿ ಸ್ಟೇಟ್ ಫಾರೆಸ್ಟ್.

ಷರಾ.—6 ಗಜಗಳಿಗೆ ಮಿಾರದ ಅಗಲವುಳ್ಳ ಇದರಡೀ ಕಂಡ ಹಾದಿಯು ಹಕ್ಕು ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಬಿಟ್ಟಿರುತ್ತದೆ.

(1) ಮದ್ದಗಿರಿಯಿಂದ ಚೆನ್ನರಾಯದುರ್ಗಕ್ಕೆ ಹಾದಿ. ಈ ಹಾದಿಯು ಸ್ಟೇಟ್ ಫಾರೆಸ್ಟನ್ನು ಚಿನಕಾವಜರ ಗ್ರಾಮದ ಸರ್ವೆ ನಂ. 16ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ ನೈರುತ್ಯ ದಿಕ್ಕಾಗಿ 2178 ಗಜಗಳ ವರಿವಿಗೆ ಹೋಗಿ ಫಾರೆಸ್ಟನ್ನು ಚೆನ್ನರಾಯದುರ್ಗ ಗ್ರಾಮದ ಸರ್ವೆ ನಂ. 73ರ ಈಶಾನ್ಯ ಮೂಲೆಯಲ್ಲಿ ಬಿಡುತ್ತದೆ.

ತಾರೀಖು 3ನೆ ಡಿಸೆಂಬರ್ 1903.

ನಂ. 377—3972, ಸ್ಯ 1900ನೆ ಇಸವಿಯ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 17ನೆ ಸೆಕ್ಷನ್‌ನ ವಿಧಿಗಳನುಸರಿಸಿ ಮೈಸೂರು ಸೀಮೆಯ ಶ್ರೀಮದ್ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಈ ಇಸ್ತಿಹಾರ್‌ನುಗ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1904ನ ಜನವರಿ ಗೂರ್ಕಿ ಲಾಗಾಯತು ಸದರೀ ಇಸ್ತಿಹಾರಿನ ಅಡಿಲಿ ವಿವರಿಸಿರುವ ಹಕ್ಕುಗಳ ಚಲಾವಣೆಗೆ ಒಳಪಟ್ಟು "ಸ್ಟೇಟ್ ಫಾರೆಸ್ಟ್‌ಗಿ" ಇರತಕ್ಕದ್ದೆಂದು ಎಣಿಸಲ್ಪಟ್ಟಿರುತ್ತೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕ್‌ನ ಹೆಸರು.	ಚಕ್ಕುಬಂದಿ
ಚಿತ್ರದುರ್ಗ.	ಹೊಳಲ್ಕೆರೆ ದುರ್ಗ.	9¼ ಚದರ ಮೈಲಿಗಳು.	ಸಂಜೀವರಾಯನ ಕೋಟೆ.	ಉತ್ತರಕ್ಕೆ.—ಜಾಲಿಪೆಂಟೆಯ ಸರ್ವೆ ನಂ. 7ರ ವಾಯುವ್ಯ ಮೂಲೆಯಿಂದ ಹೊರಟು ಲೈನು ಬಳ್ಳಾರಿ ಡಿಸ್ಟ್ರಿಕ್ಟಿನ ಪ್ರೊವಿಷಿಯಲ್ ಎಲ್ಲೆಯ ಉದ್ದಕ್ಕೂ ಚಿನ್ನವಾಲದ ಗುಡ್ಡದ ಸರ್ವೆ ನಂ. 2ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಆಗ್ನೇಯ ದಿಕ್ಕಾಗಿಯು ಮತ್ತು ಪೂರ್ವ ದಿಕ್ಕಾಗಿಯು 1 ಮೈಲಿ 1 ಫರ್ಲಾಂಗಿನ ದೂರ ಸರ್ವೆ ನಂ. 13ರ ಮಧ್ಯೆ ಸರ್ವೆ ನಂ. 15ರ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ. (ಸೇರಿರುತ್ತೆ). ತರುವಾಯ ಚಿನ್ನವಾಲದ ಗುಡ್ಡದ ಸರ್ವೆ ನಂ. 14ರ (ಸೇರಿರುತ್ತೆ). ವಾಯುವ್ಯ ಮತ್ತು ಈಶಾನ್ಯ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ಬೂದೇನಹಳ್ಳಿ ಇನಾಂ ಗ್ರಾಮದ ಪಶ್ಚಿಮ ಎಲ್ಲೆ ಅದರ ನೈರುತ್ಯ ಮೂಲೆ ವರಿವಿಗೆ. ತರುವಾಯ ದಕ್ಷಿಣ ದಿಕ್ಕಾಗಿ 4 ಫರ್ಲಾಂಗುಗಳ ದೂರ ಹೊಸಹಳ್ಳಿಯ ಸರ್ವೆ ನಂ. 32ರ ಮಧ್ಯೆ ಸರ್ವೆ ನಂ. 25ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 25, 26 ಮತ್ತು 27 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 27ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 27, 26, 25 ಮತ್ತು 24 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಆಗ್ನೇಯ ದಿಕ್ಕಾಗಿ 5 ಫರ್ಲಾಂಗುಗಳ ದೂರ ಹೊಸಹಳ್ಳಿಯ ಸರ್ವೆ ನಂ. 19ರ ಮಧ್ಯೆ ಮತ್ತು 1 ಮೈಲಿ 2 ಫರ್ಲಾಂಗುಗಳ ದೂರ ವಡೇರಹಳ್ಳಿಯ ಸರ್ವೆ ನಂ. 22 ಮತ್ತು 21 ಇವುಗಳ ಮಧ್ಯೆ ಸರ್ವೆ ನಂ. 4ರ ಉತ್ತರ ಪಾರ್ಶ್ವದ ಮಧ್ಯಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಸರ್ವೆ ನಂ. 4, 3, 23, 26 ಮತ್ತು 25 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಬಳ್ಳಾರಿ ಡಿಸ್ಟ್ರಿಕ್ಟಿನ ಉದ್ದಕ್ಕೂ ಪ್ರೊವಿಷಿಯಲ್ ಎಲ್ಲೆ. ಪಶ್ಚಿಮಕ್ಕೆ.—ಪ್ರೊವಿಷಿಯಲ್ ಎಲ್ಲೆ ಬಳ್ಳಾರಿ ಡಿಸ್ಟ್ರಿಕ್ಟಿನ ಉದ್ದಕ್ಕೂ.

ಷರಾ.—ಹಾದಿಯ ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ:—

(1) ವರುಷವೆಲ್ಲಾ ಜನಗಳ ವಸತ್ತು ದನಗಳ ಉಪಯೋಗಕ್ಕೋಸ್ಕರ ಬೂದೇನಹಳ್ಳಿಯಿಂದ ಪೊವ್ಮಗಟ್ಟಕ್ಕೆ ಹೋಗುವ 8 ಅಡಿ ಅಗಲವುಳ್ಳ ಮತ್ತು 2 ಮೈಲಿ 4 ಫರ್ಲಾಂಗು ದೂರವುಳ್ಳ ಕಾಲಹಾದಿ. ಈ ಹಾದಿಯು ಫಾರೆಸ್ಟನ್ನು ಚಿನ್ನವಾಲದ ಗುಡ್ಡದ ಸರ್ವೆ ನಂ. 2ರ ಪಶ್ಚಿಮ ಪಾರ್ಶ್ವದ ಮಧ್ಯೆ ಪ್ರದೇಶದಲ್ಲಿ ಪ್ರವೇಶಿಸಿ ಪಶ್ಚಿಮ ದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 13 ಮತ್ತು ಜಾಲಿಪೆಂಟೆಯ ಸರ್ವೆ ನಂ. 21, 22, 20, 14, 1, 3, 4 5, 6, 10 ಮತ್ತು 9 ಇವುಗಳ ಮಧ್ಯೆ ಹೋಗಿ ಆಖೈರ ನಂಬರಿನ ಪಶ್ಚಿಮ ಪಾರ್ಶ್ವದ ಮಧ್ಯ ಪ್ರದೇಶದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ವರುಷವೆಲ್ಲಾ ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಹೊಸಹಳ್ಳಿಯಿಂದ ಪೊವ್ಮಗಟ್ಟಕ್ಕೆ ಹೋಗುವ 8 ಅಡಿ ಅಗಲವುಳ್ಳ ಮತ್ತು 2 ಮೈಲಿ 2 ಫರ್ಲಾಂಗು ದೂರವುಳ್ಳ ಕಾಲಹಾದಿ. ಈ ಹಾದಿಯು ಫಾರೆಸ್ಟನ್ನು ಹೊಸಹಳ್ಳಿಯ ಸರ್ವೆ ನಂ. 25ರ ಈಶಾನ್ಯ ಮೂಲೆಯಿಂದ ಸುಮಾರು 1 ಫರ್ಲಾಂಗಿನಲ್ಲಿ ಪ್ರವೇಶಿಸಿ ನೈರುತ್ಯ ದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 32, 29, 30 ಮತ್ತು 31 ಮತ್ತು ಸಂಜೀವರಾಯನ ಕೋಟೆಯ ಸರ್ವೆ ನಂ. 1, 3, 9, 10 ಮತ್ತು 13 ಇವುಗಳ ಮಧ್ಯೆ ಹೋಗಿ ಆಖೈರ ಗ್ರಾಮದ ಸರ್ವೆ ನಂ. 12ರ ವಾಯುವ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

ತಾರೀಖು 16ನೆ ಡಿಸೆಂಬರ್ 1903.

ನಂ. 407—5004, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟಿನ ಸಬ್ ಅಸಿಸ್ಟೆಂಟ್ ಕಂ ಸರ್ವೇಯರಾದ ಮೆಸ್ಸರ್ ಎಂ. ಶ್ರೀನಿವಾಸರಾಯರಿಗೆ 1903ನೆ ಡಿಸೆಂಬರ್ ಗೂರ್ಕಿ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳಲು ಅಪೇಕ್ಷಿಸುವ ತಾರೀಖಿನಾರಭ್ಯ 22 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. ಸದರೀ ರಜಾದೊಂದಿಗೆ ಮೇಲ್ಕಂಡ ರೆಗ್ಯುಲೇಷನ್‌ಗಳ 219ನೆ ಆರ್ಟಿಕಲ್ ಅನುಸರಿಸಿ ಸದರೀಯವರಿಗೆ ಸ್ವಂತ ಕೆಲಸದ ಮೇಲೆ 5 ತಿಂಗಳು 8 ದಿನಗಳ ರಜಾ ಸಹಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಜಿ. ಇ. ರಿಕೆಟ್ಸ್,

ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರೆಟರಿ.